ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಸ್ ಪ್ರಯಾಣೀಕರ ಅನುಕೂಲಕ್ಕಾಗಿ ಎಂದು ಹೇಳಿದರು. ಆದರೆ ಈಗ ಮುನಿಸಿಪ್ಯಾಲಿಟಿಯವರು ಗಾಡಿಗಳ ಮೇಲೆ ಬರತಕ್ಕ ದಿನಸಿ ಇತ್ಯಾದಿಗಳ ಬಗ್ಗೆ ಹಣ ವಸೂಲಾದ್ದು ಮುನಿಸಿಪ್ಯಾಲಿಟಿಗೆ ಹೋಗುತ್ತದೆ. ಅದನ್ನೂ ಸಹ ಆ ಜನರ ಅನುಕೂಲಕ್ಕಾಗಿ ಏಕೆ ಉಪಯೋಗಿಸಬಾರದು ?

ಶ್ರೀ ಡಿ. ದೇವರಾಜ ಅರಸ್.—ಗಾಡಿಗಳ ಮೇಲೆ ಬರತಕ್ಕ ಸಾಮಾನು ಸರಂಜಾಮುಗಳ ವಿಚಾರಕ್ಕೂ—ಈ ಬಸ್ ಪ್ರಯಾಣೀಕರ ವಿಚಾರಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇಲ್ಲಿಗೆ ನಮ್ಮ ಜಿಲ್ಲೆಯಲ್ಲಿ ಬಸ್ ನ್ಯಾಷನಲೈಜ್ ಆಗಿ ಒಂದು ವರ್ಷವಾದರೂ ಹಾಸನದಲ್ಲಿ ಒಂದು ಸರಿಯಾದ ಬಸ್ ಸ್ಟ್ಯಾಂಡ್ ಇಲ್ಲದೆ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ, ಅಲ್ಲಿ ಒಂದು ಬಸ್‌ಸ್ಟಾಂಡ್ ಮಾಡಿಸುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅಲ್ಲಿ ಈಗಾಗಲೇ ಒಂದು ದೊಡ್ಡ ಜಾಗವನ್ನು ಮುನಿಸಿಪ್ಯಾಲಿಟಿಯವರಿಂದ ತೆಗೆದುಕೊಳ್ಳಲಾಗಿದೆ. ಅದಕ್ಕೆ ದುಡ್ಡನ್ನೂ ಕೊಡಲಾಗಿದೆ. ಅಲ್ಲಿ ಒಂದು ಕೇಂದ್ರವನ್ನು ಕಟ್ಟತಕ್ಕ ಏರ್ಪಾಡಿದೆ.

ಶ್ರೀ ಎಕ್. ಹುಚ್ಚಮಾಸ್ತಿಗೌಡ.—ಈ ಬಸ್ ಸ್ಟ್ಯಾಂಡುಗಳಲ್ಲಿ ತಿಂಗಳಿಗೆ ಎಷ್ಟು ಹಣ ವಸೂಲ್ಮಾಡಬೇಕು, ಅವುಗಳನ್ನು ಯಾವ ಷರತ್ತುಗಳ ಪ್ರಕಾರ ಮೈನ್‌ಟೈನ್ ಮಾಡಬೇಕು ಎಂಬ ಈ ಷರತ್ತುಗಳೇನಿವೆ, ಆ ಷರತ್ತುಗಳ ಪ್ರಕಾರವೇ ಈಗ ಈ ಬಸ್ ಸ್ಟ್ಯಾಂಡುಗಳನ್ನು ಮೈನ್‌ಟೈನ್ ಮಾಡಲಾಗುತ್ತಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಇಲ್ಲ.

ಶ್ರೀ ಬಿ. ಚನ್ನಬ್ಯೈರೇಗೌಡ.—ಈಗ ಕೆಲವು ಬಸ್ ಸ್ಟ್ಯಾಂಡುಗಳಲ್ಲಿರತಕ್ಕ ರೆಸ್ಟೊರೆಂಟ್ ಷಾಪುಗಳು ಇತ್ಯಾದಿಗಳೆಲ್ಲ ಇವೆ. ಇವುಗಳಿಗೆಲ್ಲ ಕಾಂಪನ್‌ಸೇಷನ್ ಯಾವ ರೀತಿ ಕೊಡುತ್ತಾರೆ ?

ಶ್ರೀ ಡಿ. ದೇವರಾಜ್ ಅರಸ್.—ಬಿಲ್ಡಿಂಗ್‌ಗಳನ್ನು ಎಸ್ಟಿಮೇಟ್ ಮಾಡಿಸಿ ಅದರ ಪ್ರಕಾರ ದುಡ್ಡು ಕೊಡಲಾಗುತ್ತದೆ.

ಶ್ರೀ ಇ. ನಾರಾಯಣಗೌಡ.—ಈ ಬಸ್ ಸ್ಟ್ಯಾಂಡುಗಳ ಸ್ಯಾನಿಟರಿ ವ್ಯವಸ್ಥೆ ಪಗೈರೆಗಳನ್ನು ನೀವು ನೋಡಿಕೊಳ್ಳುತ್ತೀರೋ ? ಅಥವಾ ಮುನಿಸಿಪ್ಯಾಲಿಟಿಯವರು ನೋಡಿ ಕೊಳ್ಳುತ್ತಾರೋ ?

ಶ್ರೀ ಡಿ. ದೇವರಾಜ ಅರಸ್.—ಮುನಿಸಿಪ್ಯಾಲಿಟಿಯವರು ನೀರನ್ನೊದಗಿಸುತ್ತಾರೆ, ವಿದ್ಯುಚ್ಛಕ್ತಿಯನ್ನು ವಿದ್ಯುಚ್ಛಕ್ತಿ ಇಲಾಖೆಯವರು ಒದಗಿಸುತ್ತಾರೆ, ಅಲ್ಲಿಯ ಸ್ಥಳ ನೈರ್ಮಲ್ಯವನ್ನು ಕಾರ್ಪೊರೇಷನ್ನಿನವರು ನೋಡಿಕೊಳ್ಳುತ್ತಾರೆ.

Villages that are without Schools in Hoskote Taluk.

*Q.—192. Sri B. CHANNABYRE GOWDA (Hoskote).—

Will the Government be pleased to state :—

(*a*) the number of villages that are without schools in Hoskote Taluk ;

(*b*) whether they have received any proposals to start schools in Hoskote Taluk ;

(*c*) if so, the action taken by them to start schools in the villages of Hoskote Taluk ?

A.—Smt. GRACE TUCKER (Deputy Minister for Education).—

(*a*) 6.
(*b*) Yes.

(SMT. GRACE TUCKER)

(*c*) 3? new schools during 1961-62 and 10 new schools during 1962-63 have been started, besides taking over 22 Departmental Aided Schools to the control of Government. The question of providing schools in the six school in the villages is under consideration.

ಶ್ರೀ ಬಿ. ಜನ್ನಬೈರೇಗೌಡ.—ಈ ಆರು ಗ್ರಾಮಗಳಿಗೆ ಶಾಲಾ ಕಟ್ಟಡಗಳಿಲ್ಲವೆಂದಲ್ಲವೇ ಶಾಲೆಗಳನ್ನು ಕೊಡದಿರುವುದು ?

Smt. GRACE TUCKER.—It is not a case of lack of buildings; six schools are not there and during this year they will be given.

Sri L. B. BIRJE.—(Marathi) [Translated by SRI B. D. JATTI [Minister for Finance]: ಈ ಆರು ಗ್ರಾಮಗಳ ಜನ ಸಂಖ್ಯೆ ಏನು ? ಅವರು ಶಾಲೆ ಕೊಡ ಬೇಕೆಂದು ಯಾವಾಗ ಅಪ್ಲಿಕೇಷನ್ ಕೊಟ್ಟಿದ್ದರು ?

Smt. GRACE TUCKER.—The six villages are actually hamlets and they are within 300 population each. They have not asked for schools but the department has sent proposals for schools for those villages under the compulsory primary education scheme.

ಶ್ರೀ ಟಿ. ಮಾದಯ್ಯಗೌಡ.—ಈ ಗ್ರಾಮಗಳಲ್ಲಿ ಶಾಲೆಯೇ ಇಲ್ಲದಿರುವಾಗ ಅಲ್ಲಿ ಕಡ್ಡಾಯ ಶಿಕ್ಷಣವನ್ನು ಹೇಗೆ ಜಾರಿಗೆ ತರುತ್ತೀರಿ ?

Smt. GRACE TUCKER.—These being villages with less than 300 population, we have to consider them after we have given schools to the villages who have 300 population.

Sri L. B. BIRJE.—(Marathi).

ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಈಗ ಸಭೆಯ ಮುಂದೆ ಬಂದಿರ ತಕ್ಕ ಪ್ರಶ್ನೆ ಒಂದು ತಾಲ್ಲೂಕಿಗೆ ಸಂಬಂಧಪಟ್ಟಿದ್ದು. ಇದನ್ನು ಇಡೀ ರಾಜ್ಯಕ್ಕೆ ಅನ್ವಯಿಸಿ ಪ್ರಶ್ನೆ ಕೇಳಲು ಬರುವುದಿಲ್ಲ. ಈಗ ಹೊನಕೋಡೆ ತಾಲ್ಲೂಕಿನ ವಿಚಾರ ಮಾತ್ರ ಸಭೆಯ ಮುಂದೆ ಬಂದಿದೆ.

Number of Rural Artisan Training Institute Centres that are working in the State.

*Q.—158. Smt. V. V. MIRJANKAR (Kumta).—

Will the Government be pleased to state:—

(*a*) the number of Rural Artisan Training Institute Centres that are working in the State;

(*b*) the crafts in which training is imparted at these Centres ?

A.—Sri K. MALLAPPA (Minister for industries and Commerce).—

(*a*) Twenty-two.

(*b*) The information is given in the statement given below.